

# ಹೊಸ ಜೀವನ ಕ್ರಮ : ಆಧ್ಯಾತ್ಮಿಕ ಮಾರ್ಗ

## ಹೊಸದು: ಅದೇನು ?

ಪ್ರತಿ ಕ್ಷಣ ಬದಲಾಗುತ್ತಿರುವುದೇ ಜಗತ್ತಿನ ಲಕ್ಷಣ. ಇಲ್ಲಿನ ಒಂದೊಂದು ವಸ್ತುವೂ ಬದಲಾಗುತ್ತದೆ, ಪ್ರತಿಯೊಂದು ಕಣವೂ ಬದಲಾಗುತ್ತದೆ. ಇದನ್ನು ಆಧರಿಸಿ ಈ ಬದಲಾವಣೆಗಳನ್ನು ನೋಡುವವನು, 'ಓ! ಇದೀಗ ಬದಲಾಗಿದೆ. ಹೊಸದೇನೋ ಬಂದಿದೆ' ಎಂದು ಗುರುತಿಸುತ್ತಾನೆ. ನಿಸರ್ಗದಲ್ಲೂ ನಿರಂತರ ನಡೆಯುವ ಪರಿವರ್ತನೆಯಲ್ಲಿ ಪ್ರತಿದಿನವೂ ಹೊಸ ಹೊಸ ಸಂಗತಿಗಳು ಗೋಚರವಾಗುತ್ತವೆ; ಗಮನಿಸುವವನಿಗೆ ಪ್ರತಿ ಕ್ಷಣ ಎಲ್ಲವೂ ಹೊಸದಾಗಿ ಕಾಣಿಸುತ್ತವೆ. ಈ ಸಹಜ ವ್ಯಾಪಾರ ಎಷ್ಟೇ ವೈವಿಧ್ಯಗಳಿಂದ ಕೂಡಿದ್ದರೂ, ಅಥವಾ ಎಷ್ಟು ಬಗೆಯ ವಸ್ತುಗಳೇ ಬದಲಾವಣೆಗೆ ಒಳಗಾಗುವುದಿದ್ದರೂ — ಇವುಗಳ ನಡುವೆ ಪುನರಾವರ್ತನೆ ಇದ್ದೇ ಇರುತ್ತದೆ. ಅದೇ ಋತುಮಾನಗಳು, ಸೂರ್ಯೋದಯ - ಅಸ್ತಮಾನಗಳು; ಹುಟ್ಟಿ ಸಾಯುವ ಜೀವ ಸಂಕುಲಗಳು. ನೋಡುವ, ಗ್ರಹಿಸುವ ವ್ಯಕ್ತಿ ಹಲವು ಬಾರಿ ಈ ಪುನರಾವರ್ತನೆಗಳನ್ನು ಕಂಡ ಬಳಿಕ, 'ಜಗತ್ತು ಹಾಗೇ ಇದೆ; ಜೀವನವೂ ಹಾಗೇ ಇದೆ. ಆದದ್ದೇ ಮರಳಿ ಮರಳಿ ಆಗುತ್ತಿದೆ' ಎಂದು ಉದ್ಗರಿಸುತ್ತಾನೆ. ಕೋಟ್ಯಂತರ ವರ್ಷಗಳಿಂದ ಜಗತ್ತು ಹೀಗೆಯೇ ನಡೆಯುತ್ತ ಬಂದಿದೆ; ಇದೇ ರೀತಿ ಮುಂದುವರಿದಿದೆ. ಎಲ್ಲ ಹೊಸತುಗಳೂ ಹಳೆಯದಾಗುತ್ತವೆ; ಜಗತ್ತು ಎಂದಿನಂತೆ ಹಾಗೆಯೇ ಸಾಗುತ್ತದೆ.

## ಜೀವನದಲ್ಲಿ ಹೊಸತನ

ಪ್ರಾಣಿಪಕ್ಷಿಗಳು, ಸಸ್ಯವರ್ಗ ಹಾಗೂ ಜಲಚರಗಳು ನಿಸರ್ಗದ ಈ ವರ್ತುಲದಲ್ಲಿ ಒಂದಾಗಿ ಬದುಕುತ್ತವೆ; ವಿವಿಧ ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಕೊಳ್ಳುತ್ತವೆ. ಆದರೆ ಮಾನವ? ಇಡೀ ಸೃಷ್ಟಿಯಲ್ಲಿ ಅವನದು ಒಂದು ಬೇರೆಯೇ ದಾರಿ. ದೈವದತ್ತವೆಂಬಂತೆ ಲಭಿಸಿದ ಮನಸ್ಸು, ಬುದ್ಧಿಶಕ್ತಿ ಇವುಗಳಿಂದ ಅವನಿಗೆ ಲಭಿಸಿದ ಸಾಮರ್ಥ್ಯ ಅಂತಿಂತಹುದಲ್ಲ. ಒಟ್ಟು ಸೃಷ್ಟಿಯನ್ನೇ ಅರಿಯುವ, ಚಿಂತಿಸುವ, ವಿಶ್ಲೇಷಿಸುವ, ಇನ್ನೂ ಆಳಕ್ಕೆ ಇಳಿದು ಸೃಷ್ಟಿರಹಸ್ಯವನ್ನು ಭೇದಿಸಬಲ್ಲ ಪ್ರಚಂಡ ಬುದ್ಧಿಶಕ್ತಿ ಅದು. ಪ್ರಪಂಚದ ಪ್ರತಿಯೊಂದು ಜೀವಿಯೂ ನಿಸರ್ಗದ ವ್ಯಾಪಾರಕ್ಕೆ ಅನುಗುಣವಾಗಿ ನಡೆದರೆ, ಮಾನವನ ಗತಿಯೇ ವಿಭಿನ್ನ ದಿಕ್ಕಿನತ್ತ. ಎಲ್ಲೆಲ್ಲೂ ಹೊಸತನ್ನು ಕಾಣುವ, ಹೊಸ ಅರಿವನ್ನು ಪಡೆಯುವ, ಹೊಸದನ್ನು ಸೃಷ್ಟಿಸುವ ಅದಮ್ಯ ಹಂಬಲ ಅವನದು. ಅವನ ಮಾನಸಿಕ, ಬೌದ್ಧಿಕ ವಿಕಾಸದ ವಿವಿಧ ಹಂತಗಳಲ್ಲಿ ಅವನು ಪಡೆದ ಬೆರಗು, ಆನಂದ, ಬೆಳಕು ಎಷ್ಟೊಂದು ಭವ್ಯವಾದುದು!

ಹೊಸತನ್ನು ಕಾಣುವ ಹಂಬಲ ಮಾನವನ ಆದಿಮ ಕಾಲದಿಂದಲೇ ಬೆಳೆದುಬಂತು ಎಂದು ಇತಿಹಾಸದ ಪುಟಗಳು ಹೇಳುತ್ತವೆ. ಇದರಿಂದಲೇ ಅವನು ನಿಸರ್ಗವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದ. ವಿಜ್ಞಾನ, ತಂತ್ರಜ್ಞಾನ, ಆಧುನಿಕ ಆವಿಷ್ಕಾರಗಳಿಗೆ ಕೊನೆಯಿಲ್ಲ; ಸೃಷ್ಟಿಯೊಳಗೆ ತನ್ನದೇ ಸೃಷ್ಟಿಯನ್ನು ಮಾಡುತ್ತ ಮಾನವ ಮುನ್ನಡೆದ. ಭೌತಿಕ ಹಾಗೂ ಬೌದ್ಧಿಕ ಸ್ತರದಲ್ಲಿ ಕಂಡುಕೊಂಡ ಹೊಸ ಆವಿಷ್ಕಾರಗಳು ಪ್ರಪಂಚವನ್ನೇ ಬದಲಾಯಿಸಿದವು. ಆದರೆ ಆಂತರಿಕ ಸ್ತರದಲ್ಲಿ? ಮನಸ್ಸು, ಬುದ್ಧಿಗಳನ್ನು ಮೀರಿ ಸಾಗುವ ಪ್ರಯತ್ನವನ್ನೂ ಮನುಷ್ಯ ಮಾಡಿದ; ಅದರ ಪರಿಣಾಮವೇ ಒಂದು ನೂತನ ಆಂತರಿಕ ಜಗತ್ತು — ಅದೇ ಆಧ್ಯಾತ್ಮಿಕ ಜಗತ್ತು.

## ಗೋಚರವಾದ ಹೊಸ ದಿಕ್ಕು

ಸಮಾಜದಲ್ಲಿ ವಿಭಿನ್ನವಾಗಿ ಆಲೋಚಿಸುವವರನ್ನು ಎಲ್ಲರೂ ಗಮನಿಸುತ್ತಾರೆ; ಅವರ ಮಾತುಗಳಿಗೆ ಪರ-ವಿರೋಧ ಪ್ರತಿಕ್ರಿಯೆಗಳು ಬಂದೇ ಬರುತ್ತವೆ. (ಎಲ್ಲರೂ ಗಮನಿಸುತ್ತಾರೆ ಎಂಬ ಕಾರಣಕ್ಕಾಗಿಯೇ ಪ್ರತಿಯೊಂದನ್ನೂ ವಿರೋಧಿಸುವ ಪ್ರಚಾರಪ್ರಿಯರ ಸಂಖ್ಯೆ ಇತ್ತೀಚೆಗೆ ಅಧಿಕವಾಗುತ್ತಿದೆ. ಅವರನ್ನು ಕುರಿತು ಇಲ್ಲಿ ಹೇಳುತ್ತಿಲ್ಲ.) ಆದರೆ ಇಲ್ಲಿಯತನಕ ಬೇರೆ ಯಾರೂ ಕಾಣದ ಸತ್ಯವನ್ನು ಕಾಣುವ, ಹೊಸ ಒಂದು ಆಯಾಮವನ್ನೇ ಗುರುತಿಸುವ ಕಾರ್ಯ ಅಂತಹ ವ್ಯಕ್ತಿಗಳಿಂದಲೇ ಸಾಧ್ಯವಾಗುವುದು. ಹೀಗೆ ವಿಭಿನ್ನವಾಗಿ ಆಲೋಚಿಸುವ ಪ್ರಕ್ರಿಯೆ ತುಂಬ ಪ್ರಾಚೀನ

ಕಾಲದಲ್ಲೇ ನಡೆದಿತ್ತು ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಈ ಬಗೆಯ ಆಲೋಚನೆಗಳು ಭಾರತದಲ್ಲೇ ಹೆಚ್ಚಾಗಿ ನಡೆದವು. ವೇದ, ಉಪನಿಷತ್ತುಗಳಲ್ಲಿ ಕಂಡುಬರುವ ಉನ್ನತ ಆಲೋಚನೆಗಳೆಲ್ಲ ಇಂತಹ 'ವಿಭಿನ್ನ' ಚಿಂತನೆಗಳ ಫಲ. ನಮ್ಮಲ್ಲಿ ತಪಸ್ಸು, ಧ್ಯಾನ, ಮನನ, ನಿದಿಧ್ಯಾಸನ, ಎಂದೆಲ್ಲ ಕರೆದುದು ಇಂತಹ ಆಳವಾದ, ಆಂತರಿಕವಾದ ಆಲೋಚನೆಗಳನ್ನೇ. ಹೀಗೆ ನಡೆದ ಚಿಂತನೆಗಳ ಫಲವೇ ಆಧ್ಯಾತ್ಮಿಕ ಮಾರ್ಗ. ಉಳಿದೆಲ್ಲ ಜೀವ, ಜಂತುಗಳ ಬದುಕಿಗಿಂತಲೂ, ಪ್ರಾಣಿಸಹಜ ಬದುಕಿಗಿಂತ ಮೇಲಲ್ಲದ ಜೀವನ ನಡೆಸುತ್ತಿರುವ ಮಾನವರಿಗಿಂತಲೂ ವಿಭಿನ್ನವಾದ ಮಾರ್ಗವಿದು. ಒಟ್ಟು ಸೃಷ್ಟಿಯನ್ನೇ ಗಮನಿಸಿ ನೋಡಿದಾಗ ಇದು ಹೊಸ ಜೀವನ ಗತಿ; ನೈಸರ್ಗಿಕ ಜೀವನಕ್ರಮದಿಂದ ಕಳಚಿ ಹೊರಬಂದ ವಿಶಿಷ್ಟ ಬಗೆಯ ಜೀವನಕ್ರಮ. ಅದುವರೆಗೆ ಮಾನವನು ಕಂಡಿದ್ದ ಬದುಕು ಈಗ ಬದಲಾಯಿತು; ಜೀವನದ ಗುರಿ, ಆದರ್ಶ, ಶೈಲಿ ಎಲ್ಲವೂ ಬದಲಾಯಿತು. ಬರೀ ಆಹಾರ, ನಿದ್ರೆ, ಮೈಥುನಗಳೇ ಬಾಳಿನ ಗುರಿಯಲ್ಲ - ಅದನ್ನು ಮೀರಿದ ಉನ್ನತ ಆದರ್ಶವೊಂದಿದೆ ಎಂಬುದು ಈ ಬಗೆಯ ಚಿಂತನೆಗಳಿಂದ ಸ್ಥಿರವಾಯಿತು. ಇದಕ್ಕನುಗುಣವಾಗಿ ಭಾರತದ ಶ್ರೇಷ್ಠ ಆದರ್ಶ ಭೌತಿಕ ಜೀವನವಲ್ಲ; ಪ್ರಾಣಿ ಸಹಜ ಜೀವನವನ್ನು ದಾಟಿಹೋಗಿ, ಹೊಸ ಬೆಳಕನ್ನರಸಿ ದಿವ್ಯ ಕ್ಷಿತಿಜದತ್ತ ಹೊರಟ ದಿಟ್ಟ ನಡಿಗೆಯೇ ಇಲ್ಲಿನ ಆದರ್ಶ. ಈ ಮಾರ್ಗದಲ್ಲಿ ಎದುರಾಗುವ ಹಲವು ಎಡರು ತೊಡರು, ಆತಂಕ, ಸೋಲುಗಳು, ಹತಾಶೆ — ಎಲ್ಲವನ್ನೂ ಎದುರಿಸಿ ಮುನ್ನುಗಲೂ ಅಂತಹ ಸಾಧಕರು ಸಿದ್ಧರಾದರು. ಎಲ್ಲವನ್ನೂ ಬಿಟ್ಟು, ಪ್ರಾಣದ ಹಂಗನ್ನೂ ತೊರೆದು ಸತ್ಯದರ್ಶನಕ್ಕಾಗಿ ತನ್ನ ಬದುಕನ್ನೆಲ್ಲ ಮೀಸಲಿಡುವ ಸಂನ್ಯಾಸಿಯ ಜೀವನ ನಮ್ಮ ದೇಶದ ಅತ್ಯುಚ್ಚ ಆದರ್ಶವಾಯಿತು.

### ಕೇವಲ ಚಿಂತನೆಯಲ್ಲ, ಬದುಕೇ ಬದಲಾಯಿತು

ಸಂದೇಹವೆಂಬುದು ಮಾನವನಿಗೆ ಒಂದು ಶಾಪವೆನ್ನುತ್ತಾರೆ. ಅದೆಷ್ಟು ಬಾರಿ ಮನಸ್ಸಿನಲ್ಲಿ ಕೆಲವು ಸಂಗತಿಗಳನ್ನು ಸ್ಥಿರೀಕರಿಸಿಕೊಂಡರೂ, ಮುಂದಿನ ಕ್ಷಣದಲ್ಲಿ, 'ಇದು ಸುಳ್ಳಿರಬಾರದೇಕೆ?' ಎಂಬ ಸಂದೇಹ ಮೂಡುತ್ತದೆ.ಆಧ್ಯಾತ್ಮಿಕ ಜಗತ್ತಿನಲ್ಲೂ ಇಂತಹ ಸಂದೇಹಗಳು ಹೆಜ್ಜೆ ಹೆಜ್ಜೆಗೂ ಕಾಡಬಹುದು. ಕೇವಲ ತಾರ್ಕಿಕವಾಗಿ, ಬೌದ್ಧಿಕವಾಗಿ ಲಭಿಸುವ ಉತ್ತರಗಳು ಆ ಹಂತದಲ್ಲಷ್ಟೇ ಉಳಿದುಬಿಟ್ಟರೆ, ಅದು ಪ್ರಾಯೋಗಿಕವಲ್ಲದೆ ಹೋಗಬಹುದು. ಹತ್ತಾರು ವಿಚಾರಗಳಂತೆ 'ಇದೂ ಒಂದು ವಿಚಾರ'ವೆಂದಷ್ಟೇ ಆಗಬಹುದು. ಆದರೆ ಆಧ್ಯಾತ್ಮಿಕ ಅನ್ವೇಷಣೆ, ಚಿಂತನೆಗಳು ನಮ್ಮಲ್ಲಿ ಹಾಗೆ ಉಳಿಯಲಿಲ್ಲ. ಪ್ರತಿಯೊಂದು ವಿಚಾರ, ಚಿಂತನೆ, ಆಧ್ಯಾತ್ಮಿಕ ಸಿದ್ಧಾಂತವನ್ನೂ ಅನುಭವದ ಒರೆಗಲ್ಲಿಗೆ ಹಚ್ಚಿ ಸತ್ಯವನ್ನು ಕಂಡುಕೊಳ್ಳುವ ವಿಧಾನ ನಮ್ಮದಾಯಿತು. ಈ ಮೂಲಕ ತಾವು ಕಂಡ ದರ್ಶನ, ಸತ್ಯ ಹಾಗೂ ಸಿದ್ಧಾಂತಗಳು ಕೇವಲ ಮಾನಸಿಕ, ಬೌದ್ಧಿಕ ಸ್ತರದಿಂದ ಪ್ರಯೋಗಿಕ ಬದುಕಿಗೆ ಇಳಿದು ಬರಬೇಕಾಯಿತು. ಅನುಭವದ ಆಧಾರವೊಂದೇ ಸತ್ಯದ ಪರಮ ಪ್ರಮಾಣವೆಂಬುದು ಇಲ್ಲಿ ಸ್ಥಾಪಿತವಾಯಿತು. ಈ ಧ್ಯೇಯಕ್ಕನುಗುಣವಾಗಿ ಬದುಕನ್ನು ರೂಪಿಸಿಕೊಂಡವರ ಮಾರ್ಗವೇ 'ಆಧ್ಯಾತ್ಮಿಕ ಜೀವನ'ವೆನಿಸಿತು. ಬದುಕಿನ ಅನುಕೂಲತೆಗಳಿಗೆ ತಕ್ಕಂತೆ ತತ್ತ್ವ, ಆದರ್ಶಗಳನ್ನು ರೂಪಿಸುವುದಲ್ಲ; ಬದಲಾಗಿ ತತ್ತ್ವ, ಆದರ್ಶಗಳಿಗೆ ತಕ್ಕಂತೆ ಜೀವನವನ್ನು ರೂಪಿಸುವುದು — ಇದು ಇಲ್ಲಿನ ಜೀವನ ಕ್ರಮವಾಯಿತು. ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆದು ಗುರಿ ತಲುಪಿದ ಕೆಲವು ಮಂದಿ ಮಹಾತ್ಮರ ಜೀವನ ಹಾಗೂ ವಾಣಿ ಪರಮಪೂಜ್ಯವೆನಿಸಿತು. ಇಲ್ಲಿ ತಮ್ಮ ಜೀವನವನ್ನೆಲ್ಲ ಇಂಥ ದಿವ್ಯ ಆದರ್ಶಕ್ಕಾಗಿ ಸಮರ್ಪಿಸಿದ ಸಂನ್ಯಾಸಿಗಳ ಜೀವನ ವಿಧಾನ ಒಂದೆಡೆ; ಅಂತಹ ತ್ಯಾಗ, ಸಾಧನೆ ಹಾಗೂ ಕಠಿಣ ಜೀವನ ನಡೆಸಲಾಗದ ಇತರ ಬಹುಸಂಖ್ಯಾತರ ಸಾಧಾರಣ ಜೀವನ ಕ್ರಮ ಇನ್ನೊಂದೆಡೆ. ಕೇವಲ ಸಂನ್ಯಾಸಿಗಳಿಗಷ್ಟೇ ಆಧ್ಯಾತ್ಮಿಕ ಮಾರ್ಗ ಎಂದಾದರೆ, ಉಳಿದವರ ಗತಿಯೇನು? ಅವರಿಗೂ ದಿವ್ಯ ಬದುಕಿನ ಆದರ್ಶ ಬೇಡವೆ? ಈ ಅಗತ್ಯಕ್ಕನುಗುಣವಾಗಿ ಎಲ್ಲರೂ ಅನುಸರಿಸಬಹುದಾದ ಧಾರ್ಮಿಕ, ಆಧ್ಯಾತ್ಮಿಕ ಜೀವನ ರೂಪುಗೊಂಡಿತು. ಹೀಗೆ ನಮ್ಮ ದೇಶದಲ್ಲಿ ತತ್ತ್ವ, ಆದರ್ಶಕ್ಕನುಗುಣವಾಗಿ ಸಮಾಜದ ಒಟ್ಟು ಜೀವನಕ್ರಮವನ್ನೇ ಬದಲಾಯಿಸಿಕೊಂಡ ಒಂದು ಅಭೂತಪೂರ್ವ ಉದಾಹರಣೆಯಿದೆ!

### ಆಧ್ಯಾತ್ಮಿಕ ಜೀವನದಲ್ಲಿ ಹೊಸ ಆಯಾಮಗಳು

ಈಗಾಗಲೇ ನೋಡಿರುವಂತೆ ಹೊಸತನ್ನು ಅರಸುವ ಪ್ರವೃತ್ತಿ ಮಾನವನ ಜೈವಿಕ ಬೆಳವಣಿಗೆಯ ಒಂದು ಲಕ್ಷಣವಾಗಿ ಗೋಚರವಾಯಿತು. ಈ ಪ್ರವೃತ್ತಿ ಆಂತರಿಕವಾಗಿ ತೊಡಗಿಕೊಂಡಾಗ ಕಾಣಿಸಿಕೊಂಡ ಮಾರ್ಗವೇ ಆಧ್ಯಾತ್ಮಿಕ ಜೀವನ. ಅತ್ಯಂತ ಕುತೂಹಲಕಾರಿಯಾದ ಅಂಶವೇನೆಂದರೆ, ಹೊಸತಾಗಿ ರೂಪಿಸುವ ಈ ಮಾರ್ಗ ಬಾಹ್ಯಜಗತ್ತಿನಂತೆ ಹಳೆಯದಾಗುತ್ತ ಹೋಗಲಿಲ್ಲ; ಬದಲಾಗಿ ಪ್ರತಿಕ್ಷಣವೂ ಹೊಸದಾಗುತ್ತಾ ಸಾಗಿತು! ಈ ವಿಲಕ್ಷಣ, ವೈರುಧ್ಯದ ಕಾರಣದಿಂದ ಹಲವು ಬಾರಿ ಆಧ್ಯಾತ್ಮಿಕ ಜೀವನ ಅತ್ಯಂತ ರೋಚಕವೂ, ಕುತೂಹಲಕಾರಿಯೂ, ಅಷ್ಟೇ ರೋಮಾಂಚಕವೂ ಆಗಿರುವಂತೆ ಕಾಣಿಸುವುದು. ಆಧ್ಯಾತ್ಮಿಕ ಮಾರ್ಗದಲ್ಲಿನ ನಿತ್ಯನೂತನತೆಯನ್ನು ಹೀಗೆ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಬಹುದು:

**೧) ಮನಸ್ಸಿನ ಕಾರ್ಯವಿಧಾನ:** ಪ್ರತಿಕ್ಷಣವೂ ಬದಲಾಗುತ್ತಿರುವುದು, ಹೊಸ ಹೊಸ ಆಲೋಚನೆಗಳನ್ನು ಮಾಡುತ್ತಿರುವುದು ಮನಸ್ಸಿನ ಲಕ್ಷಣ. ಆಧ್ಯಾತ್ಮಿಕ ಸಾಧನೆ ಪ್ರಧಾನವಾಗಿ ನಡೆಯುವುದು ಮನಸ್ಸಿನ ಮೂಲಕ; ಇದಕ್ಕನುಗುಣವಾಗಿ ಹೊಸ ವಿಚಾರ, ಭಾವನೆ, ಚಿಂತನೆಗಳು ಮನಸ್ಸಿನಲ್ಲಿ ನಿರಂತರ ನಡೆಯುತ್ತಿರುತ್ತದೆ. ಪತಂಜಲಿಯ ಯೋಗಸೂತ್ರಗಳಲ್ಲಿ **'ಯೋಗಶ್ಚಿತ್ತವೃತ್ತಿನಿರೋಧಃ'** *(ಸೂತ್ರ ೨)* ಎಂಬುದು ಅತ್ಯಂತ ಮುಖ್ಯವಾದ ಒಂದು ಸೂತ್ರ

ವಾಗಿದೆ. ನಿರಂತರ ಮನಸ್ಸಿನಲ್ಲಿ ಏಳುವ ಆಲೋಚನೆಗಳನ್ನು ನಿಗ್ರಹಿಸಿ, ಸಾಧಕನು ತನ್ನ ಸ್ವರೂಪದಲ್ಲಿ ನೆಲೆಸುವಂತೆ ಮಾಡು ವುದೇ ಎಲ್ಲ ಸಾಧನೆಗಳ ಗುರಿ. ಸೂತ್ರ ಸಣ್ಣದು, ವಿಚಾರವೂ ಸುಲಭ — ಆದರೆ ಮಾತ್ರ ಅತ್ಯಂತ ವ್ಯಾಪಕವಾದುದು. ಗುರಿ ತಲುಪುವ ತನಕ ಸಾಧಕನು ಹಾದುಹೋಗುವ ಹತ್ತುಹಲವು ಏರಿಳಿತಗಳು, ಅವನು ಕಾಣುವ ದರ್ಶನಗಳು, ಮನಸ್ಸು ಹೊಂದುವ ಪರಿವರ್ತನೆ — ಇವುಗಳಿಗೆ ಲೆಕ್ಕವಿಲ್ಲ. ಆದ್ದರಿಂದ, ಮನಸ್ಸನ್ನು ಮಾಧ್ಯಮವಾಗಿ ಬಳಸುವುದೇ ಆಧ್ಯಾತ್ಮಿಕ ಜೀವನದ 'ನಿತ್ಯವಿನೂತನ'ವೆಂಬ ವಿಶೇಷತೆಗೆ ಬಹುಪಾಲು ಕಾರಣವಾಗಿದೆ.

**೨) ಬುದ್ಧಿಯ ಪ್ರಕಾಶ; ಹೊಸ ಮಿಂಚು:** ಒಂದು ವಿಷಯ ವನ್ನು 'ಇದು ಹೀಗೆ' ಎಂದು ನಿಶ್ಚಯಾತ್ಮಕವಾಗಿ ಅರಿಯುವ ಶಕ್ತಿ ಬುದ್ಧಿಯದು. ಮನಸ್ಸು ಅರಿತದ್ದನ್ನು ವಿಶ್ಲೇಷಿಸಿ, ನಿರ್ಣಯಿಸುವ ಕಾರ್ಯ ಮಾಡುವ ವೇಳೆಗೆ ಬುದ್ಧಿಯಲ್ಲಿ ಮಿಂಚುವ ಪ್ರಕಾಶ, ಅನುಭವದಿಂದ ಮಾತ್ರ ಅರಿಯಬಹುದಾದ ಸಂಗತಿ. ಬುದ್ಧಿಗೆ ಬೆಳಗುವ ಗುಣವಿದೆ; ವಸ್ತುವಿನ ಅಥವಾ ವಿಷಯದ ಅಂತರಂಗ ವನ್ನು ಹೊಕ್ಕು ಅದರ ಅರಿವನ್ನು ಮೂಡಿಸುವ ಈ ಸಾಮರ್ಥ್ಯ ಅಸಾಧಾರಣವಾದುದು. ಒಂದು ಸಣ್ಣ ವಸ್ತುವನ್ನು ಅರಿತು, 'ಇದು ಇಂಥದು' ಎಂದು ನಿರ್ಣಯಿಸುವ ಸಣ್ಣ ಕಾರ್ಯದಿಂದ ಹಿಡಿದು, ಪರಬ್ರಹ್ಮನ ಕಾರ್ಯದಲ್ಲೆಲ್ಲ ಸದಾ ಮಿಂಚು, ಬೆಳಕು, ಆನಂದ ಜೊತೆಗೂಡಿರುತ್ತವೆ. ಈ ಕಾರಣದಿಂದಲೂ ಆಧ್ಯಾತ್ಮಿಕ ಜೀವನ ನಿತ್ಯನೂತನವೆನಿಸುವುದು.

**೩) ಆತ್ಮದ ನಾವೀನ್ಯತೆ:** ನಮ್ಮ ನೈಜಸ್ವರೂಪವನ್ನೇ ನಾವು 'ಆತ್ಮ'ವೆನ್ನುತ್ತೇವೆ. ಆದಿ, ಅಂತ್ಯಗಳಿಲ್ಲದ, ಸರ್ವವ್ಯಾಪಕವೂ ಅನಂತವೂ ಆದ, ಎಲ್ಲ ಮಿತಿಗಳನ್ನೂ ಮೀರಿ ನಿತ್ಯದಲ್ಲಿ ನೆಲೆಗೊಂಡಿರುವ ಆತ್ಮನ ಅನುಭವವನ್ನು ನಮ್ಮ ಸಾಧಾರಣ ಗ್ರಹಿಕೆಯ ಮೂಲಕ ಭಾವಿಸಿಕೊಂಡರೂ ಸಾಕು, ಭವ್ಯವೂ ಅದ್ಭುತವೂ ಆದ ಒಂದು ಕಲ್ಪನೆ ನಮಗಾಗುತ್ತದೆ. ಆದರೆ ಆತ್ಮಾನುಭವವನ್ನು ಪಡೆದ, ಸಾಕ್ಷಾತ್ಕಾರ ಹೊಂದಿ ಸತ್ಯವನ್ನು ಕಂಡ ಮಹಾತ್ಮರ ಮಾತಿನಂತೆ, 'ಆತ್ಮವನ್ನು ವಿವರಿಸಲಾಗದು; ಅದರ ಅನುಭವ ದಿಂದ ಮಾತ್ರ ಒಬ್ಬನು ಪರಿಪೂರ್ಣತೆಯನ್ನು ಹೊಂದಬಹುದು'. ಶಾಸ್ತ್ರಗಳು ವಿವರಿಸುವಂತೆ ಆತ್ಮನ ಲಕ್ಷಣ **'ಸತ್-ಚಿತ್-ಆನಂದ'**. ಅದುವೇ ಎಲ್ಲದರ ಅಸ್ತಿತ್ವ ಹಾಗೂ ಆಧಾರ; ಅದುವೇ ಎಲ್ಲ ಚೈತನ್ಯಗಳ ಮೂಲ; ಅದುವೇ ಎಲ್ಲ ಆನಂದಗಳ ಆಗರ. 'ಕೊನೆಯಿಲ್ಲದ ಆನಂದ' ಎಂಬುದೇ ಆತ್ಮನ ವಿಶೇಷತೆ. **'ರಸೋ ವೈ ಸಃ'** ಅಂದರೆ, ಆತ್ಮನು ರಸವೇ ಆಗಿರುವನು — ಎಲ್ಲದರ ಸಾರ ವಾಗಿರುವನು. ಆದ್ದರಿಂದ ಇಲ್ಲಿ ಹಳೆಯದು, ಜಡ, ಏಕತಾನತೆ ಇತ್ಯಾದಿ ಭಾವಗಳಿರಲಾರವು. ಈ ತತ್ತ್ವದ ಹಿನ್ನೆಲೆಯಿಂದ ನೋಡಿದಾಗ, ಆಧ್ಯಾತ್ಮಿಕ ಜೀವನದ ಅಂತಿಮ ಗುರಿಯು ನಿತ್ಯ ನವೀನ ಲಕ್ಷಣವನ್ನು ಹೊಂದಿದೆ; ಆದ್ದರಿಂದ ಮಾರ್ಗವೂ ತನ್ನ ಗುರಿಯ ಲಕ್ಷಣದಿಂದ ಪ್ರಭಾವಿತವಾಗಿದೆ.

### ಪ್ರಪಂಚದ ಪುನರಾವರ್ತನೆ

ಜಗತ್ತಿನಲ್ಲಿ ಪ್ರತಿಯೊಂದು ಬದಲಾವಣೆಯೂ ಕೆಲವೊಂದು ನಿಯಮಗಳಿಗೆ ಅನುಗುಣವಾಗಿ ನಡೆಯುವುದರಿಂದ, ಯಾವ ಒಂದು ಜಡವಸ್ತುವೂ ಸ್ವತಂತ್ರವಾಗಿ ಅಥವಾ ಸ್ವೇಚ್ಛೆಯಿಂದ ಬದಲಾಗಲು ಸಾಧ್ಯವಿಲ್ಲ. ಆತ್ಮನಿಗೆ ಮಾತ್ರವೇ ಸ್ವತಂತ್ರವಾದ ಇಚ್ಛೆ ಇರುವುದರಿಂದ, ಅದನ್ನು ಅವಲಂಬಿಸಿರುವ ಜೀವಿಗಳು ಮಾತ್ರ ಸ್ವ-ಇಚ್ಛೆಯಿಂದ ಚಲಿಸುವುವು. ಘನವಸ್ತುಗಳ ರಾಶಿ ಸಮಸ್ತ ಭೂಮಂಡಲವನ್ನೇ ತುಂಬಿಕೊಂಡಿದೆ; ಇನ್ನೆಷ್ಟೋ ಅಸಂಖ್ಯಾತ ಗ್ರಹ, ನಕ್ಷತ್ರಗಳಿಂದ ಕೂಡಿದ ವಿಶ್ವದುದ್ದಕ್ಕೂ ವ್ಯಾಪಿಸಿದೆ. ಅವೆಲ್ಲ ಒಟ್ಟಾಗಿ ಸೇರಿಕೊಂಡರೂ, ಒಂದು ಚಿಕ್ಕ ಇರುವೆಯ ಜೀವಕ್ಕೆ ಸಮಾನವಾಗಲಾರದು. ವ್ಯತ್ಯಾಸ ಇಷ್ಟೆ: ಒಂದು ಚೈತನ್ಯ, ಇನ್ನೊಂದು ಜಡ. ಜಡವಸ್ತುಗಳ ರಾಶಿಯಾದ ಭೌತಿಕ ಜಗತ್ತು ನಿರಂತರ ಬದಲಾಗುವುದು; ಆ ಬದಲಾವಣೆ ಬರೀ ಪುನರಾವರ್ತನೆಯಲ್ಲದೆ ಬೇರಲ್ಲ. ಸೃಷ್ಟಿ-ಸ್ಥಿತಿ-ನಾಶ ಈ ಮೂರು ಅವಸ್ಥೆಗಳ ಮೂಲಕ ತೋರಿಬರುವ ಜಗತ್ತು ಶಾಶ್ವತವೂ ಸತ್ಯವೂ ಆದ ಆತ್ಮಕ್ಕೆ ಹೇಗೆ ಸಮನಾಗುವುದು? ಪುನರಾವರ್ತನೆ ಹೊಂದುವ ಜಡಜಗತ್ತು ಪ್ರತಿಕ್ಷಣವೂ ಹಳೆಯದಾಗುವುದು; ಹೊಸತನ ತೋರಿಕೆ ಮಾತ್ರ. ಎಲ್ಲ ಜೀವಿಗಳಲ್ಲಿ ಅಡಗಿರುವ ಚೈತನ್ಯವೇ ಆತ್ಮ; ಅದೊಂದೇ ಶಾಶ್ವತ — ಅದು ಪ್ರತಿಕ್ಷಣವೂ ನೂತನ; ಅನಂತದಲ್ಲಿ ವ್ಯಾಪ್ತವಾಗಿರುವ ಅದನ್ನು 'ಅಖಂಡೈಕರಸ'ವೆನ್ನಬಹುದು. ಆಧ್ಯಾತ್ಮಿಕ ಮಾರ್ಗ ಇಂಥ ಆತ್ಮನೆಡೆಗೆ. ವಿವಿಧ ದೇವತೆಗಳ ಮೂಲಕ, ಜ್ಞಾನ-ಭಕ್ತಿ-ಯೋಗವೇ ಮುಂತಾದ ವಿಧಾನಗಳ ಮೂಲಕ ಈ ಮಾರ್ಗ ವೈವಿಧ್ಯಮಯವಾಗಿದೆ. ಆದರೆ ಗುರಿ ಒಂದೇ; ನಿತ್ಯನೂತನವಾದ, ಅನಂತವೂ ಶಾಶ್ವತವೂ ಆನಂದಮಯವೂ ಆದ ಗುರಿಯಾಗಿದೆ ಅದು. ಆತ್ಮನೆಡೆಗೆ ಸಾಗುವ ದಿವ್ಯಪಥವೂ ಅದೇ ರೀತಿ ನಿತ್ಯನೂತನವಾಗಿದೆ.

ನಕ್ಷತ್ರ ದೂರದಲ್ಲಿ ಮಿನುಗುತ್ತಿದೆ; ಕೋಟಿ ವರ್ಷಗಳಿಂದ ಹಾಗೆಯೇ ಮಿನುಗುತ್ತಿದೆ. ನೋಡುವಾಗ ಪ್ರತಿಕ್ಷಣವೂ ಅದು ಹೊಳೆಯುವಂತೆ ತೋರುವುದು. ಆದರೆ ನಕ್ಷತ್ರವೂ ಶಾಶ್ವತವಲ್ಲ; ಅದರ ಮಿನುಗುವಿಕೆಯೂ ಶಾಶ್ವತವಲ್ಲ. **ಆತ್ಮವೇ** ನಿಜವಾಗಿ ಶಾಶ್ವತ ಮಿನುಗುವ ನಕ್ಷತ್ರ; ಅದು ಚಿರಂತನ ಸತ್ಯವನ್ನೇ ಬೆಳಗುತ್ತಿದೆ. ಹೃದಯದಲ್ಲಿ ಅದನ್ನು ಕಂಡು, ಅನುಭವಿಸಿದ ಮಾನವನೇ ಧನ್ಯ.

### ನವೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೩ | ಶನಿವಾರ | ಏಕಾದಶಿ |
| ೭ | ಬುಧವಾರ | ಶ್ರೀ ಕಾಳೀ ಪೂಜೆ |
| ೧೯ | ಸೋಮವಾರ | ಏಕಾದಶಿ |
| ೨೦ | ಮಂಗಳವಾರ | ಸ್ವಾಮಿ ಸುಬೋಧಾನಂದ ಜಯಂತಿ |
| ೨೨ | ಗುರುವಾರ | ಸ್ವಾಮಿ ವಿಜ್ಞಾನಾನಂದ ಜಯಂತಿ |